ಶ್ರೀ ಕೆ. ಲಕ್ಷ್ಮಣ್ಣ : ಸನ್ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಖಾಸಗಿ ವೈದ್ಯಕೀಯ ಸಂಸ್ಥೆಗಳು ಎಷ್ಟಿವೆ ಎಂದು ಕೇಳಿದ್ದೆ. ಅದಕ್ಕೆ ಹದಿನೈದು ಎಂದು ಹೇಳಿದ್ದಾರೆ. ಈ ಸಂಸ್ಥೆಗಳ ಆರ್ಥಿಕ ವ್ಯವಸ್ಥೆ ಹೇಗಿದೆ ಎಂದರೆ, ಸುವ್ಯವಸ್ಥೆಯಲ್ಲಿವೆ ಎಂದು ಹೇಳುತ್ತಿದ್ದಾರೆ. ಯಾವುದೇ ಸಂಸ್ಥೆ ಕೂಡ ಅವರ ಹಣವನ್ನು ವಿದ್ಯಾಭ್ಯಾಸಕ್ಕೆ ಖರ್ಚುಮಾಡುತ್ತಾ ಇಲ್ಲ. ವಿದ್ಯಾರ್ಥಿಗಳ ಮುಖಾಂತರ ವಂತಿಕೆ ತೆಗೆದುಕೊಂಡೇ ಸಂಸ್ಥೆಗಳನ್ನು ನಡೆಸಬೇಕಾಗಿದೆ. ಈ ದಿಸೆಯಲ್ಲಿ ಎರಡು ವರ್ಷಗಳಿಂದ ಉಚ್ಚ ನ್ಯಾಯಾಲಯದ ತೀರ್ಪಿನಿಂದ ವಿದ್ಯಾರ್ಥಿಗಳಿಗೆ ಬಹಳ ಗೊಂದಲಮಯ ಆಗಿದೆ. ಬಹುತೇಕ ಅಂಕಗಳನ್ನು ತೆಗೆದುಕೊಂಡ ವಿದ್ಯಾರ್ಥಿಗಳು ಕೂಡ ಶುಲ್ಕವನ್ನು ಕೊಡದೆ ಪ್ರವೇಶ ತೆಗೆದುಕೊಳ್ಳುವುದಕ್ಕೆ ಹೋಗಿಲ್ಲ. ಆ ದೃಷ್ಟಿಯಿಂದ ಇವತ್ತು 10-15 ಲಿಸ್ಟ್‌ಗಳು ವೈದ್ಯಕೀಯ ಇಲಾಖೆಯಿಂದ ಆಗುತ್ತಾ ಇವೆ. ಇದಕ್ಕೆ ಒಂದು ಕಾನೂನನ್ನು ತಂದು ಈ ವಿದ್ಯಾಸಂಸ್ಥೆಗಳಿಗೆ ಇಷ್ಟು ಸೀಟುಗಳು ಅಂತ ಕೊಟ್ಟು, ಮೆರಿಟ್‌ಗೆ ಇಷ್ಟು ಕೊಡಬೇಕು ಎಂದು ಮಾಡಿದರೆ ಇದು ವ್ಯವಸ್ಥಿತವಾಗಿ ನಡೆಯುತ್ತದೆ. ಇಲ್ಲದಿದ್ದರೆ ಬಹುತೇಕ ಅಂಕಗಳನ್ನು ತೆಗೆದುಕೊಂಡ ವಿದ್ಯಾರ್ಥಿಗಳೇ ಪ್ರವೇಶ ತೆಗೆದುಕೊಳ್ಳುವುದಕ್ಕೆ ಹೋಗಿಲ್ಲ. ಇದನ್ನು ನಾವು ನೋಡುತ್ತಿದ್ದೇವೆ. ಹಿಂದೆ ಒಂದು-ಎರಡು ಲಿಸ್ಟ್‌ಗಳಲ್ಲಿ ಮುಗಿಯುತ್ತಿದ್ದುದು ಈಗ 15 ಲಿಸ್ಟ್‌ಗಳವರೆಗೂ ಹೋಗುತ್ತಿದೆ. ಇದನ್ನು ಸರಿಪಡಿಸಬೇಕಾಗಿದೆ. ಏಕೆಂದರೆ ಇದರಿಂದ ವಿದ್ಯಾರ್ಥಿಗಳಿಗೂ ತೊಂದರೆಯಾಗಿದೆ, ವಿದ್ಯಾ ಸಂಸ್ಥೆಗಳಿಗೂ ತೊಂದರೆಯಾಗಿದೆ. ಆದ್ದರಿಂದ ಈ ಶಾಸನಸಭೆಯಲ್ಲಿ ಅದಕ್ಕೆ ಒಂದು ಕಾನೂನನ್ನು ತಂದು ಆ ವಿದ್ಯಾಸಂಸ್ಥೆಗಳಿಗೆ ಇಷ್ಟು ಸೀಟು ಎಂದು ಕೊಟ್ಟು ಮತ್ತು ಮೆರಿಟ್ ಮೇಲೆ ಇಷ್ಟು ಸೀಟುಗಳನ್ನು ಸರ್ಕಾರ ಹಂಚುವ ವ್ಯವಸ್ಥೆ ಮಾಡಿದರೆ ಒಳ್ಳೆಯದು ಎಂದು ತಮ್ಮ ಮುಖಾಂತರ ಮಾನ್ಯ ಸಚಿವರಿಗೆ ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಬಿ. ಶಿವಣ್ಣ : ಅಧ್ಯಕ್ಷರೇ, ಸಲಹೆ ಒಳ್ಳೆಯದು. ಇದನ್ನು ಪರಿಶೀಲನೆ ಮಾಡುತ್ತೇವೆ.

ಮುಳಬಾಗಿಲಿನ ಟೌನ್‌ನಲ್ಲಿ ಗುರುಭವನದ ನಿರ್ಮಾಣ

370 - ಶ್ರೀ ಎಮ್. ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಳಬಾಗಿಲಿನ ಟೌನ್‌ನಲ್ಲಿ ಉಪಾಧ್ಯಾಯರಿಗೋಸ್ಕರ ಮಾಡಿರುವ ಗುರುಭವನ ಕಟ್ಟಲು ಸರ್ಕಾರದವರು ಎಷ್ಟುಹಣ ಮಂಜೂರು ಮಾಡಿರುವುದು? ಮಾಡಿದ್ದಲ್ಲಿ ಎಂದು ಮಂಜೂರು ಮಾಡಲಾಗಿದೆ.

ಆ) ಕಟ್ಟಡ ಪ್ರಾರಂಭವಾಗದಿರಲು ಕಾರಣಗಳೇನು?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಸರ್ಕಾರ ಹಣ ಮಂಜೂರು ಮಾಡಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಎಂ.ವಿ. ವೆಂಕಟಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದ ಕಾಲದಲ್ಲಿ ಇದಕ್ಕೆ ಹಣ ಸ್ಯಾಂಕ್ಷನ್ ಮಾಡಿದ್ದಾರೆ. ನಾನು ತಂದು ಪ್ರೂಫ್ ತೋರಿಸುತ್ತೇನೆ. ಅಂತಹ ಸಮಯದಲ್ಲಿ ಈಗ ಏನು ಉತ್ತರ ಕೊಟ್ಟಿದ್ದಾರೆ, ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂಬುದು ನನಗೆ ಬೇಕು.

ಶ್ರೀ ಎಸ್.ಎಂ. ಯಾಹ್ಯಾ : ಈ ಗುರುಭವನಗಳನ್ನು ಮಾಡುವಂಥ ಪ್ರೊಸೀಜರ್‌ಗಳು ಇವೆ. ಈ ಹಣ ಟೀಚರ್ಸ್ ಫಂಡ್‌ನಿಂದಲೇ ಬರುತ್ತದೆ. ಮೊದಲು 40 ಪರ್ಸೆಂಟ್

ಎ.ಇ.ಒ. ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಇದೆ. ಆ ಸಮಿತಿಯವರು ಪ್ರಪೋಸಲ್ ಕಳುಹಿಸಬೇಕು. ಶೇಕಡಾ 60 ರಷ್ಟು ನಾವು ಈ ಟೀಚರ್ಸ್ ಫಂಡ್‌ನಿಂದ ಕೊಡುತ್ತೇವೆ. ಇದು ಸರ್ಕಾರದ ಹಣ ಅಲ್ಲ, ಟೀಚರ್ಸ್ ಫಂಡ್‌ನಿಂದ ಕೊಡುವಂಥ ಹಣ. ಆಮೇಲೆ ಶೇಕಡಾ 40 ರಷ್ಟು ಹಣ ಸಾರ್ವಜನಿಕರಿಂದ ಬರಬೇಕಾಗಿದೆ. ಸಾರ್ವಜನಿಕರಿಂದ ಬಂದ ಹಣ ಖರ್ಚಾದ ನಂತರ ಎರಡೂವರೆ ಲಕ್ಷದವರೆಗೆ ಟೀಚರ್ಸ್ ಫಂಡ್‌ನಿಂದ ಕೊಡುವಂಥ ಸ್ಕೀಮ್ ಇದು. ಈ ಸ್ಕೀಮ್ ಪ್ರಕಾರ ಈವರೆಗೂ ಪ್ರಪೋಸಲ್ ಬಂದಿಲ್ಲ. ಪ್ರಪೋಸಲ್ ಬಂದರೆ, ಇವತ್ತು ಸಹ ನಮ್ಮಲ್ಲಿ ಏಳು ಕೋಟಿ ರೂಪಾಯಿ ಹಣ ಈ ಫಂಡ್‌ನಲ್ಲಿ ಇರುವುದರಿಂದ, ಆ ಫಂಡ್‌ನಿಂದ ನಾವು ಕೊಡುತ್ತೇವೆ. ಆದರೆ ಪ್ರೊಸೀಜರ್ ಸರಿಯಾಗಿ ಇದುವರೆಗೂ ಆಗಲಿಲ್ಲ. ಅದರ ಪ್ರಪೋಸಲ್ ಸಹ ಸರ್ಕಾರದ ಎದುರು ಇಲ್ಲ.

ಪ್ರಾಥಮಿಕ ಶಾಲಾ ಶಿಕ್ಷಕರ ಖಾಲಿ ಹುದ್ದೆಗಳು

632 - ಶ್ರೀ ಮಂಜುನಾಥ ಸಿ. ಕುನ್ನೂರ (ಶಿಗ್ಗಾಂವ್) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಖಾಲಿ ಇರುವ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳು ಎಷ್ಟು?

ಆ) ಸರಕಾರದಿಂದ ಎಷ್ಟು ಹುದ್ದೆ ಯಾವ ಆಧಾರದ ಮೇಲೆ ಭರ್ತಿ ಮಾಡಲಾಗಿದೆ?

ಇ) ಧಾರವಾಡ ಜಿಲ್ಲೆಯಲ್ಲಿ ಎಷ್ಟು ಶಿಕ್ಷಕರ ಹುದ್ದೆಗಳು ಖಾಲಿ ಇವೆ? (ತಾಲ್ಲೂಕುವಾರು ಮಾಹಿತಿ ನೀಡುವುದು)

ಈ) ಶಿಗ್ಗಾಂವ ಮತ್ತು ಸವಣೂರ ತಾಲ್ಲೂಕುಗಳಲ್ಲಿ ಎಷ್ಟು ಹುದ್ದೆಗಳು ಖಾಲಿ ಇವೆ?

ಉ) ಈ ಬಗ್ಗೆ ಸರ್ಕಾರದವರು ತೆಗೆದುಕೊಂಡ ಕ್ರಮಗಳೇನು?

ಶ್ರೀ ಎಸ್.ಎಂ. ಯಾಹ್ಯಾ (ಉನ್ನತ ಶಿಕ್ಷಣ ಸಚಿವರು) :

ಅ) 3608 ಹುದ್ದೆಗಳು

ಆ) ದಿನಾಂಕ 31-5-94ರ ವರೆಗೆ ಖಾಲಿ ಇದ್ದ 15,323 ಹುದ್ದೆಗಳನ್ನು ಅಭ್ಯರ್ಥಿಗಳ ವಿದ್ಯಾರ್ಹತೆ ಹಾಗೂ ಮೀಸಲಾತಿಗೆ ಅನುಗುಣವಾಗಿ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಜಿಲ್ಲಾ ಉದ್ಯೋಗ ವಿನಿಮಯ ಕಛೇರಿಯಿಂದ ಸಾರ್ವಜನಿಕ ಶಿಕ್ಷಣ ಇಲಾಖೆಯ ಜಿಲ್ಲಾ ಉಪ ನಿರ್ದೇಶಕರುಗಳು ಪಡೆದು ಆಯ್ಕೆ ಮಾಡಿದ್ದಾರೆ.

ಇ) ಧಾರವಾಡ ಜಿಲ್ಲೆಯಲ್ಲಿ ಪ್ರಸ್ತುತ 276 ಹುದ್ದೆಗಳು ಖಾಲಿ ಇವೆ. ತಾಲ್ಲೂಕುವಾರು ವಿವರ ಹೀಗಿದೆ.

ರಾಣಿಬೆನ್ನೂರು	37	ಹುಬ್ಬಳ್ಳಿ	02
ರೋಣ	06	ಕಲಘಟಗಿ	16
ಸವಣೂರು	21	ಮಾದರಗಿ	13
ಬ್ಯಾಡಗಿ	22	ನರಗುಂದ	04
ಧಾರವಾಡ	05	ನವಲಗುಂದ	07
ಗದಗ	09	ಶಿಗ್ಗಾಂವ	22
ಹಾನಗಲ್	37	ಶಿರಾಡಿ	07
ಹಾವೇರಿ	22	ಹೊನ್ನಾಳ	13
ಹಿರೇಕೆರೂರು	33		

ಈ) ಶಿಗ್ಗಾಂವ - 22

ಸವಣೂರು - 21